ಅದರ ಝುಗಮಗಿಸುವ ಬೆಳಕನ್ನು ನೋಡುವುದೇ ನಮಗೆಲ್ಲಾ ದೊಡ್ಡ ಸಂಭ್ರಮ! ಅದರ ಪ್ರಖರ ಬೆಳಕು ದೇವರ ಮನೆಯನ್ನು ದಾಟಿ ಕಪ್ಪಡಿಗೆಮನೆಯನ್ನೂ ಬೆಳಗುತ್ತಾ ನಮ್ಮ ಭಯವನ್ನು ತಾತ್ಕಾಲಿಕವಾಗಿ ದೂರ ಮಾಡುತ್ತಿತ್ತು. ಆ ಬೆಳಕಿನಲ್ಲಿ ಕಪ್ಪಡಿಗೆಮನೆಯನ್ನು ಆಕ್ರಮಿಸಿಕೊಂಡಿರುತ್ತಿದ್ದ ಬಿಳಿಮಂಡೆಯ ಮುದುಕಿ ಅದೆಲ್ಲಿ ಮಾಯವಾಗಿರುತ್ತಿದ್ದಳೋ ಆ ದೇವರೇ ಬಲ್ಲ. ಚೌತೀ ಹಬ್ಬದ ಆ ನಾಲ್ಕು ದಿನ ಮಾತ್ರ ನಾವು ಯಾವುದೇ ಭಯವಿಲ್ಲದೇ ನಿರಾತಂಕವಾಗಿ ಒಳಗೂ ಹೊರಗೂ ಓಡಾಡಿಕೊಂಡಿರುತ್ತಿದ್ದೆವು. ಧೈರ್ಯಕ್ಕೆ ದೇವರ ಗೂಡಿನಲ್ಲಿ ಪ್ರತಿಷ್ಠಾಪಿಸಿರುತ್ತಿದ್ದ ಗಣೇಶ ಗೌರಿಯರೂ ಜೊತೆಯಾಗಿರುತ್ತಿದ್ದರು. ಕಪ್ಪಡಿಗೆಮನೆಯಲ್ಲಿ ಹಬ್ಬದ ಸಾಮಾನುಗಳು, ಬಾಳೆ ಎಲೆ, ತೆಂಗಿನಕಾಯಿ, ಬಾಳೆಹಣ್ಣು, ಬಾಗಿನ ಪೂಜಾ ಸಾಮಗ್ರಿಗಳು ತುಂಬಿಕೊಂಡು ಹೊಸಾ ಕಳೆ ಬರುತ್ತಿತ್ತು. ಆಗ ಮಾತ್ರಾ ನಾವು ಅಲ್ಲಿಗೆ ಹೋಗಿ ಹಿರಿಯರು ಹೇಳಿದ ಯಾವ ವಸ್ತುವನ್ನಾದರೂ ತಂದುಕೊಡುವಷ್ಟು ಧೈರ್ಯವಂತರಾಗುತ್ತಿದ್ದೆವು. ಅಷ್ಟೇಕೆ, ಹಬ್ಬಕ್ಕೆಂದು ಅಜ್ಜ ಕೊಡಿಸಿದ ನಮ್ಮ ಪಟಾಕಿ, ಸುರ್ ಸರ್ ಬತ್ತಿಗಳ ಪೆಟ್ಟಿಗೆಯನ್ನು ಕೂಡಾ ಅಲ್ಲಿಯೇ ಇಟ್ಟುಕೊಂಡಿರುತ್ತಿದ್ದೆವು. ಹೊಳೆಯುವ ಪೆಟ್ರೋಮ್ಯಾಕ್ಸ್ ಬೆಳಕಿನಲ್ಲಿ ಅಜ್ಜಿ, ಅಮ್ಮ ಚಿಕ್ಕಮ್ಮಂದಿರು ಹೊಸಾ ಸೀರೆ ಉಟ್ಟು, ಅಲಂಕೃತರಾಗಿ, ಹೊಸದಾಗಿ ತೊಟ್ಟುಕೊಂಡ ಕೈಬಳೆಗಳ ಸದ್ದು ಮಾಡುತ್ತಾ ಸ್ವರ್ಣ ಗೌರಿ ಪೂಜೆ ಮಾಡುತ್ತಿದ್ದರೆ, ದೇವರ ಮುಂದಿನ ದೀಪದ ಬೆಳಕು, ಧೂಪದ ಘಮ, ಮಂತ್ರೋಚ್ಛಾರಗಳೆಲ್ಲಾ ಪಕ್ಕದ ಕಪ್ಪಡಿಗೆಮನೆಯನ್ನೂ ತುಂಬಿ ಅದು ಬೆಳಕಿನರಮನೆಯಾಗಿ ಮಾರ್ಪಡುತ್ತಿತ್ತು. ನಾವು ಹೊಸ ಬಟ್ಟೆಯ ಸರಬರ ಸದ್ದು ಮಾಡುತ್ತಾ ಓಡಾಡಿಕೊಂಡಿರುತ್ತಿದ್ದೆವು. ಹಬ್ಬ ಮುಗಿದು, ತೋಟದ ಕೆರೆಯಲ್ಲಿ ಗೌರೀ ಗಣೇಶರನ್ನು ಮುಳುಗಿಸಿ ಬಂದಾದ ಮೇಲೆ, ಗ್ಯಾಸ್‌ಲೈಟು ಯಾವಾಗ ತನ್ನ ಬೆಳಕನ್ನು ಆರಿಸಿಕೊಂಡು ಮೂಲೆ ಸೇರಿತೋ ಆವಾಗ ಕಪ್ಪಡಿಗೆಮನೆ ಮತ್ತೆ ಮೊದಲಿನ ಸ್ಥಿತಿಗೇ ಬಂದುಬಿಡುತ್ತಿತ್ತು. ಅದ್ಯಾವ ಮಾಯದಲ್ಲೋ ಮತ್ತೆ ಆ ಬಿಳಿಮಂಡೆ ರಕ್ಕಸಿ ಕಪ್ಪಡಿಗೆಮನೆಯ ಬಾಗಿಲ ಹಿಂದಿನ ಹಂಡೆಯಲ್ಲಿ ಬಂದು ಕುಳಿತು ಬಿಡುತ್ತಿದ್ದಳು! ನಾವು, ದೇವರೇ ವರ್ಷ ಕಾಲಾವಧಿಯೂ ಈ ಹಬ್ಬ ಹೀಗೆಯೇ ಇರಬಾರದಿತ್ತೇ... ಎನ್ನುವ ಹಳಹಳಿಕೆಯೊಂದಿಗೆ ಮತ್ತೆ ಕಪ್ಪಡಿಗೆಮನೆಯ ಕಡೆ ತಿರುಗಿ ನೋಡದೇ ಓಡುತ್ತಾ ಚೌಕಿ ದಾಟುತ್ತಿದ್ದೆವು.

ಸ್ವಲ್ಪ ದೊಡ್ಡವಳಾದ ಮೇಲೆ ಒಮ್ಮೆ ನಾನು, ಉಪ್ಪಿನಕಾಯಿ ತೆಗೆಯಲು ಚಿಮಣಿ ದೀಪ ಹಿಡಿದು ಹೊರಟಿದ್ದ ಅಮ್ಮನ ಜೊತೆ ಕಪ್ಪಡಿಗೆಮನೆಗೆ ಹೋಗಿದ್ದೆ. ಚಿಮಣಿ ಬುಡ್ಡಿಯ ಮಂಕು ಬೆಳಕಿನಲ್ಲಿ ಕಪ್ಪಡಿಗೆಮನೆ ಮೊದಲ ಬಾರಿಗೆ ತನ್ನ ಮೂಲ ರೂಪದಲ್ಲಿ ನನ್ನ ಕಣ್ಣ ಮುಂದೆ ಅನಾವರಣಗೊಂಡಿತ್ತು. ಇಕ್ಕಟ್ಟಾದ ದಪ್ಪದಪ್ಪ ಗೋಡೆಗಳ ಕೋಣೆಯ ಒಂದು ಬದಿಗೆ ಎಂದೂ ತೆಗೆಯಲು ಬಾರದಂತೆ ಗಟ್ಟಿಯಾಗಿ ಕೂತು ಹೋಗಿದ್ದ ದಪ್ಪ ಕರೀ ಬಾಗಿಲಿನ ಪುಟ್ಟ ಕಿಟಕಿ, ಸುತ್ತಲೂ ದಪ್ಪನೆಯ ಕಪ್ಪು ಹಿಡಿದ ನಾಗೊಂದಿಗೆಗಳು, ಮೂಲೆಯಲ್ಲಿ ಮಣ್ಣಿನಿಂದ ಮಾಡಿದ, ಸಗಣಿ ಸಾರಿಸಿದ ಜೋಡಿ ಒಲೆಗಳು ಅದರ ಮೇಲೆ ಹಳೆಯ ಕಾಲದ ದೊಡ್ಡ ದೊಡ್ಡ ತಾಮ್ರ ಹಿತ್ತಾಳೆಯ ಪಾತ್ರೆಗಳು, ಅಲ್ಲೇ ಬದಿಯಲ್ಲಿ ಅಡ್ಡ ಹಾಕಿದ್ದ ಬಿದಿರು ಗಣೆಯ ಮೇಲೆ ಹರವಿದ್ದ ಮುತ್ತಜ್ಜಿಯ ಮಡಿಸೀರೆ, ಒಂದೆರಡು ಕೆಂಪು ಮಡಿ ಸೀರೆ ತುಂಡುಗಳು, ಮೂಲೆಯಲ್ಲಿ ಬೇತಾಳದಂತೆ ನಿಂತ, ಅಜ್ಜಿ ತನ್ನ ಬಿಡುವಿನ ವೇಳೆಯಲ್ಲಿ ಮಾಡಿ ಕಟ್ಟಿಟ್ಟಿದ್ದ ಒಣ ಬಾಳೆಯೆಲೆಯ ದೊನ್ನೆಗಳ ಉದ್ದನೆಯ ಕಟ್ಟು. ಮುಟ್ಟಿದರೆ ಭೀತಿ ಹುಟ್ಟಿಸುವಂತೆ ಗಟ್ಟಿಯಾಗಿ ಕೀರ್‌ಗುಡುವ ದಪ್ಪ ಬಾಗಿಲ ಹಿಂದೆ ದೊಡ್ಡ ಬಾಯಿ ತೆರೆದುಕೊಂಡು ಕುಳಿತಿದ್ದ ಕಪ್ಪು ಬಿಲದಂತಾ ದೊಡ್ಡ ಹಂಡೆ. ಬಹುಶಃ ಅದೇ ಬಿಳಿಮಂಡೆ ಮುದುಕಿಯ ಆವಾಸ ಸ್ಥಾನವಿರಬೇಕೆಂದು ಬೆಚ್ಚಿಬೀಳುವಷ್ಟರಲ್ಲಿ ಗೋಡೆಯ ಒಳಗೆ ಯಾರೋ ದುಡು ದುಡುನೆ ಓಡಿದ ಸದ್ದು! ಇನ್ನೇನು ಹೆದರಿಕೆಯಿಂದ ಹೃದಯ ಒಡೆದೇ ಹೋಯಿತೇನೋ ಅನ್ನುವಷ್ಟರಲ್ಲಿ ಅದು ಗೋಡೆಯ ಒಳಗೆ